ನನ್ನ ಓದು

# ದೃಷ್ಟಿ ಮಂದವಾದ ಕಾಲಕ್ಕೆ ವೈಚಾರಿಕತೆಯ ನಿಶಿತ ನೋಟ



**ಪದ್ಮನಾಭ ಭಟ್ ಶೇವ್ಕಾರ**

ನಕ್ಷೆ ಹಿಡಿದು ತಡಕಾಡಬೇಡ ನಕ್ಷತ್ರಲೋಕವನ್ನು
ತೊಂಡು ಮೇವರಿಗೆ ಹಾದಿ ಕೇಳದಿರು
ಹತ್ತು ದುರ್ಗವನ್ನು

-ದ.ರಾ. ಬೇಂದ್ರೆ

ಗೌರೀಶ ಕಾಯ್ಕಿಣಿ ಅವರ ಸಮಗ್ರ ಸಾಹಿತ್ಯವನ್ನು ಓದುತ್ತ ಹೋದ ಹಾಗೆ ನೆನಪಾದ ಸಾಲುಗಳು ಇವು.

ಕನ್ನಡ ಸಾಹಿತ್ಯ, ಬೌದ್ಧಿಕತೆ, ವೈಚಾರಿಕತೆ ಎಲ್ಲವೂ ತೆವಳುತ್ತಿರುವ ಕಾಲಘಟ್ಟವಿದು. ನಾವು ಯಾವ ಹೊತ್ತಿನಲ್ಲಿಯೂ ನಿರಾಶವಾದಿಗಳಾಗಬೇಕಿಲ್ಲ ಎಂಬುದೇನೋ ನಿಜವೇ. ಆದರೆ ವಾಸ್ತವಕ್ಕೆ ಬೆನ್ನುಮಾಡಿ, ಎಲ್ಲವೂ ಆಶಾದಾಯಕವಾಗಿದೆ ಎಂಬ ಭ್ರಮೆಗೆ ಆತುಕೊಂಡು ಮೈಮರೆಯುವುದೂ ಸಿನಿಕತೆಯ ಮತ್ತೊಂದು ಮುಖವೇ ಅಲ್ಲವೇ? ಈಗಿನ ವಾತಾವರಣ ಆಶಾದಾಯಕವೋ, ನಿರಾಶಾದಾಯಕವೋ, ಅಥವಾ ಒಂದು ರೂಪಾಂತರದ ಕಾಲಘಟ್ಟವೋ, ಹೊಸ ಹುಟ್ಟಿನ ಸೂಚನೆಯೋ ಎಂಬೆಲ್ಲವೂ ನಂತರದ ಚರ್ಚೆ. ಅದಕ್ಕೂ ಮೊದಲು ಈ ಕಾಲಘಟ್ಟವನ್ನು ದಿಟ್ಟಿಸಿ ನೋಡುವುದು, ವಾಸ್ತವದ ಸತ್ಯಗಳನ್ನು ಅರ್ಥಮಾಡಿಕೊಳ್ಳುವುದು ಅನಿವಾರ್ಯ ಅಗತ್ಯ.

ನೈತಿಕತೆ ಎನ್ನುವುದು ಎಲ್ಲ ಕ್ಷೇತ್ರಗಳಲ್ಲಿಯೂ ತಳಸೇರಿರುವ, ಧರ್ಮ ಎಂಬುದು ದೈಹಿಕ-ಮಾನಸಿಕ ಹಿಂಸೆಯ ದಾಳವಾಗಿರುವ, ಹಣ ಎನ್ನುವುದು ಸುಖದ ಪರಿಕಲ್ಪನೆಯನ್ನೇ ಬದಲಿಸಿರುವ ಕಾಲವಿದು. ವ್ಯಕ್ತಿಗತ ಗೌರವ ಎನ್ನುವುದು ಮಾರಾಟದ ಸರಕಾಗಿರುವ, ಮನುಷ್ಯ ಮಾರುಕಟ್ಟೆಯ 'ಯೂನಿಟ್' ಆಗಿರುವ, ಅನಿಷ್ಟಗಳೇ ಸಮಾಜದ ಪ್ರತಿಷ್ಠೆಗಳಾಗಿ ಮೆರೆಯುತ್ತಿರುವ ಕಾಲವಿದು. ಈ ಕಾಲವನ್ನು ಒಂದು ಶಬ್ದದಲ್ಲಿ ಹಿಡಿಯಬೇಕೆಂದರೆ 'ಮೀಡಿಯೊಕ್ರಸಿ' ಎಂಬುದೇ ಸರಿಯಾದ ಶಬ್ದವಾದೀತು. 'ಭಂಜಕತೆ' ಈ ಕಾಲವನ್ನು ವ್ಯಾಪಕವಾಗಿ ಆವರಿಸಿದ ರೋಗದ ಲಕ್ಷಣ ಎನ್ನಬಹುದು.

ಆದರೆ ಎಂಥ ದುರ್ಭರ ಕಾಲದಲ್ಲಿಯೂ ಜೀವಂತಮನಸ್ಸು ಇನ್ನಷ್ಟು ಜೀವಂತವಾಗಿ ಬದುಕಲು, 'ಜಡ'ತೆಯಿಂದ ತಪ್ಪಿಸಿಕೊಂಡು ಹೊಸ ಹುಟ್ಟುಗಳನ್ನು ಪಡೆದುಕೊಳ್ಳಲು ಯತ್ನಿಸುತ್ತಲೇ ಇರುತ್ತದೆ. ಈ ಕಾಲದಲ್ಲಿಯೂ ಅಂಥ ಜೀವಂತಿಕೆಗೆ ಹಂಬಲಿಸುತ್ತಿರುವ ಹಿಳ್ಳುಗಳು ವಿರಳವಾಗಿಯಾದರೂ ಇದ್ದೇ ಇವೆ. ಹಾಗಾಗಿಯೇ 'ಎಲ್ಲವೂ ಮುಗಿದುಹೋಗಿಲ್ಲ' ಎಂದು ನಮ್ಮ ಒಳಮನಸ್ಸು ಹೇಳುತ್ತಲೇ ಇರುತ್ತದೆ.

ಹಾಗಾದರೆ ಹೀಗೆ ಜೀವಂತಿಕೆಗಾಗಿ ಹಂಬಲಿಸುತ್ತಿರುವ ಮನಸ್ಸುಗಳು ತಮ್ಮನ್ನು